ಸಾಕ್ಷಿಯನ್ನು ದಿಃ 22.11.2017 ರಂದು ಪುನಃ ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು.

**ಪಾಟೀ ಸವಾಲು ಃ ಎದುರುದಾರರ ಪರ ಶ್ರೀ.ಆರ್.ಆರ್ ವಕೀಲರಿಂದಃ**

ಅಪಘಾತವು ಕುವೆಂಪು ಸ್ಕೂಲ್ ಹತ್ತಿರ ಆಗಿರುತ್ತದೆ, ಆ ರಸ್ತೆಯ ಹೆಸರನ್ನು ನನಗೆ ಹೇಳಲು ಅಗುವುದಿಲ್ಲ. ಅಪಘಾತವು 8.30 ಗಂಟೆ ಸಮಯದಲ್ಲಿ ಆಗಿದ್ದು, ಆ ರಸ್ತೆಯು ವಿಶಾಲವಾಗಿತ್ತು ಎಂದರೆ ಸರಿ. ಆ ಸಮಯದಲ್ಲಿ ನಾನು ನನ್ನ ಬೈಕನ್ನು ಅತೀ ಜೋರಾಗಿ ಓಡಿಸಿಕೊಂಡು ಬರುತ್ತಿದ್ದೆ ಎಂದರೆ ಸರಿಯಲ್ಲ. ಅಪಘಾತವು ನನ್ನ ಅಜಾರಾಗೂಕತೆಯಿಂದ ಆಗಿರುತ್ತದೆ ಎಂದರೆ ಸರಿಯಲ್ಲ. ಅಪಘಾತದಲ್ಲಿ 2 ವಾಹನಗಳು ಜಖಂಗೊಂಡಿದ್ದು ಮತ್ತು 2 ವಾಹನದ ಸವಾರರಿಗೂ ಏಟಾಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ, ಆದರೆ ನನಗೆ ಏಟಾಗಿರುತ್ತದೆ. ಆ ಸಮಯದಲ್ಲಿ ನಾನು ಹೆಲ್ಮೆಟ್ ಧರಿಸಿರಲಿಲ್ಲ ಎಂದರೆ ಸರಿಯಲ್ಲ. ಅಪಘಾತವಾದ ಸಮಯದಲ್ಲಿ ನನಗೆ ಡಿಎಲ್ ಇರಲಿಲ್ಲ. ಅಪಘಾತದಲ್ಲಿ 1 ನೇ ಎದುರೂರನಿಗೂ ಓಟಾಗಿದ್ದರಿಂದ ಅಪೋಲೋ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡದಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. 1 ನೇ ಎದರುರಾರನಿಗೆ 43 ಸಾವಿರಳಷ್ಟು ವೈಧ್ಯಕೀಯ ವೆಚ್ಚ ಬಂದಿರುತ್ತದೆ ಎಂದರೆ ನನಗೆ ಗೊುತ್ತಿಲ್ಲ. ನಾನು ಈಗಲೂ ಸಹ ಸೆಂಟ್ ಜೋಸೆಫ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿರುತೆತೇನೇ ಎಂದರೆ ಸರಿ. ನಾನು ಸೆಂಟ್ ಜೋಸೆಫ್ ಆಸ್ಪೆತ್ರೆಯಲ್ಲಿ ಕೆಲಸ ಮಾಡುತ್ತಿದ್ದರಿಂದ ವೈಧ್ಯಕೀಯ ಬಿಲ್ಲುಗಳನ್ನು ಸೃಷ್ಟಿ ಮಾಡಿ ಹಾಜರುಪಡಿಸಿದ್ದೇನೆ ಎಂದರೆ ಸರಿಯಲ್ಲ. ನನಗೆ ಅಪಘಾತದಲ್ಲಿ ಸಾಮಾನ್ಯ ಸ್ವರೂಪದ ಗಾಯಗಳಾಗಿದ್ದವು ಎಂದರೆ ಸರಿಯಲ್ಲ. ಈಗ ನಾನು ಸಂಪೂರ್ಣವಾಗಿ ಚೇತರಿಸಿಕೊಂಡಿದ್ದೇನೆ ಎಂದರೆ ಸರಿಯಲ್ಲ. ಪೋಲೀಸರೊಂದಿಗೆ ಶಾಮೀಲಾಗಿ 1 ನೇ ಎದುರುದಾರರನ ಮೇಲೆ ಸುಳ್ಳು ದೂರನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. 1 ಮತ್ತು 2 ನೇ ಎದುರುದಾರನ ಮೇಲೆ ಪರಿಹಾರ ಹಣ ಕೊಡುವ ಹೊಣೆಗಾರಿಕೆ ಇರುವುದಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ ಃ

(ನನ್ನ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ,

ಹೆಚ್ಚುವರಿ ಲಘು ವ್ಯವಹಾರಗಳ ನ್ಯಾಯಾಧೀಶರು
ಮತ್ತು ಎಂ.ಎ.ಸಿ.ಟಿ., ಮೈಸೂರು.